ಮಿಷನ್ ಆಸ್ಪತ್ರೆಗೆ ಹೋಗುವುದು ವಾಡಿಕೆ. ಇಲ್ಲಿಯ ವೈದ್ಯರು ದಾದಿಯರು ಎಲ್ಲ ಪರಿಚಿತರೇ! ಆದರೆ ಈ ಸಲ ಹೋದಾಗ ಮಾತ್ರ ಹಳೆಯ ಸಿಬ್ಬಂದಿ ಬದಲಾಗಿದ್ದರೋ ಅಥವೊ ಪಿ.ಪಿ.ಇ. ಕಿಟ್ಟಿನೊಳಗೆ ಅವರ ಗುರುತಿಸಲಾಗಲಿಲ್ಲವೊ?

ಬಸಣ್ಣನಿಗೆ ಮೊಟ್ಟ ಮೊದಲಬಾರಿಗೆ ಆಸ್ಪತ್ರೆಯೆಂಬುದು ನರಕದ ಬಾಗಿಲಿನಂತೆ, ಸಿಬ್ಬಂದಿಗಳೆಲ್ಲಾ ಯಮರೂಪಿಯಾಗಿ ಕಂಡಿದ್ದರು. ಒಂದು ದಿನ ಅಡ್ಮಿಟ್ ಮಾಡಿಕೊಂಡು 'ಗಾಳಿ' ಕೊಟ್ಟಿದ್ದರೆ ಜನಾಬಾಯಿ ಒಂದು ತಿಂಗಳು ಸುಧಾರಿಸಿಕೊಳ್ಳಬಹುದಿತ್ತು. ಆದರೆ, ಅಲ್ಲಿ ಹಾಸಿಗೆ ಖಾಲಿ ಇಲ್ಲವೆಂದೂ, ಆಕ್ಸಿಜನ್ ಇಲ್ಲವೇ ಇಲ್ಲ ಎಂದು ಸುತರಾಮ್ ನಿರಾಕರಿಸಿ ಇಲ್ಲ ಸಲ್ಲದ ನೆಪ ಹೇಳಿ ಅಲ್ಲಿಂದ ಇವರ ಕಾಲು ಕೀಳಿಸಿದ ಅವರ ನಿರ್ದಯತೆ ನೋಡಿದರೆ ಜನಾಬಾಯಿ ಸಾಯುವ ಹಾಗಿದ್ದರೆ ಮನೆಯಲ್ಲೇ ಸಾಯಲಿ ಎಂದು, ಮೆಡಿಸಿನು, ಸಿರಪುನೊಂದಿಗೆ ಬಂಡೆ ಬಸಪ್ಪನ ದೊಡ್ಡಿಗೆ ವಾಪಸು ಬಂದಿದ್ದರು.

ಕಟ್ಟಿದ ಕೈ ಬಿಚ್ಚದಂತೆ ಲಗಮಣ್ಣ ವಿದೇಯ

